

ಮೂರು ವರ್ಷಗಳಿಂದ ಆಟದ ಉತ್ತುಂಗದಲ್ಲಿರುವ ನಾಸಿಕ್‌ನ ವಿದಿತ್ ಗುಜರಾತಿ ನಾಲ್ಕನೇ ಬೋರ್ಡ್‌ನಲ್ಲಿ ಅಜೇಯರಾಗಿದ್ದರು. 10 ಪಂದ್ಯಗಳಲ್ಲಿ ಐದು ಗೆಲುವಿನೊಡನೆ ಏಳೂವರೆ ಪಾಯಿಂಟ್ಸ್ ಕಡಿಮೆ ಸಾಧನೆಯೇನೂ ಆಗಿರಲಿಲ್ಲ. ಹರಿಕೃಷ್ಣ ಸೀಮಿತ ನಾಲ್ಕು ಪಂದ್ಯಗಳ ಅವಕಾಶದಲ್ಲಿ ಎಡವಲಿಲ್ಲ. ತಂಡಕ್ಕೆ ಶ್ರೀನಾಥ್ ನಾರಾಯಣನ್ ಅವರ ಯುವ ನಾಯಕತ್ವದ ಬೆಂಬಲವಿತ್ತು.

ಓಪನ್ ತಂಡಕ್ಕೆ ಹೋಲಿಸಿದರೆ, ಮಹಿಳಾ ತಂಡದ ಚಿನ್ನ ಗೆಲ್ಲುವ ಹಾದಿ ಸುಲಭವಾಗಿರಲಿಲ್ಲ. ಪೋಲೆಂಡ್ ಮೇಲೆ ಅನಿರೀಕ್ಷಿತ ಸೋಲು ಕಂಡ ಭಾರತ, 9ನೇ ಸುತ್ತಿನಲ್ಲಿ ಅಮೆರಿಕ ವಿರುದ್ಧ ಸಮ ಮಾಡಿಕೊಂಡ ಕಾರಣ ಕಜಕಸ್ತಾನ ಮೊದಲ ಬಾರಿ ಮುನ್ನಡೆ ಗಳಿಸಿತ್ತು. ಹೀಗಾಗಿ ಕೊನೆಯ ಸುತ್ತಿನವರೆಗೆ ಭಾರತಕ್ಕೆ ಚಿನ್ನ ಖಚಿತವಾಗಿರಲಿಲ್ಲ. ಆದರೆ ಕಡೆಯ ಸುತ್ತಿನಲ್ಲಿ ಭಾರತದ ಮಹಿಳೆಯರು (ಅಜರ್‌ಬೈಜಾನ್ ವಿರುದ್ಧ) ಗೆದ್ದು, ಕಜಕಸ್ತಾನ ತಂಡ ಅಮೆರಿಕ ವಿರುದ್ಧ 'ಡ್ರಾ'ಕ್ಕೆ ಸಿಲುಕಿದ ಕಾರಣ ಚಿನ್ನ ಭಾರತಕ್ಕೆ ಒಲಿಯಿತು.

ಜೂನ್‌ನಲ್ಲಿ ವಿಶ್ವ ಜೂನಿಯರ್ ಚಾಂಪಿಯನ್ನಳಾದ ದಿವ್ಯಾ ದೇಶಮುಖ್, 11 ಸುತ್ತುಗಳಿಂದ 9 ಪಾಯಿಂಟ್ಸ್ ಕಲೆಹಾಕಿ ಮಿಂಚಿದರು. ಗ್ರ್ಯಾಂಡ್‌ಮಾಸ್ಟರ್ ಆಗುವ ಹಂಬಲದಲ್ಲಿರುವ ದೆಹಲಿಯ 21 ವರ್ಷ ವಯಸ್ಸಿನ ವಂತಿಕಾ ಅಗರವಾಲ್ ಕೂಡ ಉತ್ತಮ ಪ್ರದರ್ಶನ ನೀಡಿ, ಆಡಿದ 9ರಲ್ಲಿ 7.5 ಪಾಯಿಂಟ್ಸ್ ಗಳಿಸಿದರು. ಮೂರನೇ ಮತ್ತು ನಾಲ್ಕನೇ ಬೋರ್ಡ್‌ನಲ್ಲಿ ಇವರಿಬ್ಬರ ಅಜೇಯ ಸಾಧನೆಯೇ ಭಾರತದ ಚಿನ್ನದ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿತು. ವೈಯಕ್ತಿಕ ಚಿನ್ನವೂ ಅವರಿಗೇ ಒಲಿಯಿತು. ಪೋಲೆಂಡ್ ಎದುರು ವೈಶಾಲಿ, ಹಾರಿಕಾ ಸೋತರೂ ದಿವ್ಯಾ ಗೆದ್ದಿದ್ದು ಅವರ ಆತ್ಮವಿಶ್ವಾಸ ತೋರಿಸಿತು. ಮಹಿಳಾ ತಂಡದ ಯಶಸ್ಸಿನಲ್ಲಿ ನಾಯಕ–ಕೋಚ್ ಆಗಿದ್ದ ಗ್ರ್ಯಾಂಡ್‌ಮಾಸ್ಟರ್ ಅಭಿಜಿತ್ ಕುಂಟೆ ಅವರ ಪಾತ್ರ ಮರೆಯುವಂತಿಲ್ಲ.

ಭಾರತ ತಂಡಗಳ ಈ ಸಾಧನೆ, ಕಿರಿಯ ಆಟಗಾರರಿಗೆ ಪ್ರೇರಣೆಯಾಗಿ ಕಂಡರೆ ಅಚ್ಚರಿಯಿಲ್ಲ. ಕೆಲವು ವರ್ಷಗಳಿಂದ ಯುವ ಆಟಗಾರರ ಪ್ರದರ್ಶನ ಸಂಚಲನ ಮೂಡಿಸಿದ್ದರಿಂದ ಈ ಆಟದಲ್ಲಿ ತೊಡಗುವವರ ಸಂಖ್ಯೆ ಬೆಳೆಯುತ್ತಿದೆ. ಕಳೆದ ವರ್ಷ ಬಾಕುವಿನಲ್ಲಿ (ಅಜರ್‌ಬೈಜಾನ್) ನಡೆದ ವಿಶ್ವಕಪ್‌ನಲ್ಲಿ ಪ್ರಜ್ಞಾನಂದ ಫೈನಲ್‌ವರೆಗೆ ತಲುಪಿದ್ದರು. ಈ ವರ್ಷ ಕ್ಯಾಂಡಿಡೇಟ್ಸ್ ಟೂರ್ನಿಯ ಎಂಟು ಆಟಗಾರರಲ್ಲಿ ಭಾರತದ ಮೂವರು ಅರ್ಹತೆ ಪಡೆದಿದ್ದರು. ಕೆನಡಾದಲ್ಲಿ ನಡೆದ ಟೂರ್ನಿಯಲ್ಲಿ ಅಂತಿಮವಾಗಿ ಗೆದ್ದ ಗುಕೇಶ್, ವಿಶ್ವ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಆಡುವ ಅರ್ಹತೆ ಗಿಟ್ಟಿಸಿದರು. ಹಾಲಿ ಚಾಂಪಿಯನ್, ಚೀನಾದ ಡಿಂಗ್ ಲಿರೆನ್ ವಿರುದ್ಧ ಸಿಂಗಪುರದಲ್ಲಿ ನವೆಂಬರ್ 25ರಿಂದ ನಡೆಯುವ ವಿಶ್ವ ಕಿರೀಟದ ಫೈನಲ್‌ನಲ್ಲಿ ಚೆನ್ನೈ ಆಟಗಾರ ಗೆದ್ದರೆ ಭಾರತದ ಚದುರಂಗದ ವರ್ಚಸ್ಸು ಇನ್ನಷ್ಟು ಹೊಳಪುಗೊಳ್ಳಲಿದೆ.

ಪ್ರತಿಕ್ರಿಯಿಸಿ: **feedback@sudha.co.in**

### ಮೈಲಿಗಲ್ಲಿನತ್ತ ಅರ್ಜುನ್, ಗುಕೇಶ್

- ಒಲಿಂಪಿಯಾಡ್‌ನಲ್ಲಿ ಉತ್ತಮ ಪ್ರದರ್ಶನದಿಂದ ಅರ್ಜುನ್ ಇರಿಗೇಶಿ ಅವರ ಲೈವ್ ರೇಟಿಂಗ್ 2797.2 ತಲುಪಿದೆ. ಭಾರತದಲ್ಲಿ ವಿಶ್ವನಾಥನ್ ಆನಂದ್ ಮಾತ್ರ ಫಿಡೆ ಕ್ರಮಾಂಕ ಪಟ್ಟಿಯಲ್ಲಿ 2800ರ ರೇಟಿಂಗ್ ದಾಟಿದ್ದಾರೆ. ಚೆಸ್ ಇತಿಹಾಸದಲ್ಲಿ 15 ಮಂದಿ ಮಾತ್ರ ಈ ಮೈಲಿಗಲ್ಲು ದಾಟಿದ್ದಾರೆ.
- ಅರ್ಜುನ್ ರೇಟಿಂಗ್ ಪಟ್ಟಿಯಲ್ಲಿ ಅಮೆರಿಕದ ಫ್ಯಾಬಿಯಾನೊ ಕರುವಾನಾ ಅವರನ್ನು ಹಿಂದೆ ಹಾಕಿ ಮೂರನೇ ಸ್ಥಾನಕ್ಕೆ ಏರಿದ್ದಾರೆ.
- ಗುಕೇಶ್ ಅವರು ವಿಶ್ವ ಕ್ರಮಾಂಕದಲ್ಲಿ ಐದನೇ ಸ್ಥಾನಕ್ಕೆ ಏರಲಿದ್ದಾರೆ. ಇದೇ ಮೊದಲ ಸಲ ಅಗ್ರ ಐದರಲ್ಲಿ ಭಾರತದ ಇಬ್ಬರು (ಗುಕೇಶ್, ಅರ್ಜುನ್) ಸ್ಥಾನ ಪಡೆದಂತಾಗಲಿದೆ.
- ಮಹಿಳೆಯರ ವಿಭಾಗದಲ್ಲಿ ದಿವ್ಯಾ ದೇಶಮುಖ್ 11ನೇ ಕ್ರಮಾಂಕಕ್ಕೆ ಏರಲಿದ್ದಾರೆ.